A Collection of Exquisite Gold Jewellery
S.L.SHET
Jewellers & Diamond House
K. S. Rao Road, Hampankatta, Mangalore - 01. Ph : 0824 - 2440242
Timings : 10.00 a.m. to 2.00 p.m. & 3.30 p.m. to 7.30 p.m.

ಉದಯವಾಣಿ
ಜನಮನದ ಜೀವನಾಡಿ
ಮಣಿಪಾಲ । ಬೆಂಗಳೂರು । ಹುಬ್ಬಳ್ಳಿ । ಕಲಬುರಗಿ । ದಾವಣಗೆರೆ । ಮುಂಬಯಿ
Regd.No.UDP/1259/2015-17 | udayavani.com | UDAYAVANI – KANNADA DAILY – MANIPAL ಮಣಿಪಾಲ, ಮಂಗಳವಾರ, ಜನವರಿ 24, 2017 ಬೆಲೆ: ₹ 4-00 ವಿದೇಶ ಬೆಲೆ: ₹ 5-00 ಪುಟಗಳು 14

ಸಂಧಿಲಿ
SDM
ISO / GMP CERTIFIED

# ವಿಟಿಯು ಪರೀಕ್ಷೆ: ಸಹ್ಯಾದ್ರಿ ವಿದ್ಯಾರ್ಥಿಗಳ ಸಾಧನೆ


ಸಾಶಾ ರೈ ಪಿ.


ಅಕ್ಷಯ ಭಂಡಾರಿ

ಮಂಗಳೂರು, ಜ. 23: ಬೆಳಗಾವಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯ(ವಿಟಿಯು) ನಡೆಸಿದ ಎಂ.ಟೆಕ್ ಬೋರ್ಡ್ ಪರೀಕ್ಷೆಯಲ್ಲಿ ಕಂಪ್ಯೂಟರ್ ಏಯ್ಡೆಡ್ ಡಿಸೈನ್ ಆಫ್ ಸ್ಟ್ರಕ್ಚರ್ಸ್ ವಿಭಾಗದಲ್ಲಿ ಅಡ್ಯಾರ್ ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿನಿ ಸಾಶಾ ರೈ ಪಿ. ಅವರು ಪ್ರಥಮ ಸ್ಥಾನ ಗಳಿಸಿ ಚಿನ್ನದ ಪದಕ ಪಡೆದಿದ್ದಾರೆ. ಅವರು ತಮ್ಮ ಪ್ರಾಜೆಕ್ಟನ್ನು ಸಂಸ್ಥೆಯ ನಿರ್ದೇಶಕ ಡಾ । ಡಿ.ಎಲ್. ಪ್ರಭಾಕರ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದರು.

ಸಂಸ್ಥೆಯ ಮತ್ತೋರ್ವ ವಿದ್ಯಾರ್ಥಿ ಅಕ್ಷಯ ಭಂಡಾರಿ ಅವರು ವಿಟಿಯುನ ಬೋರ್ಡ್ ಪರೀಕ್ಷೆಯ ಮೆಕ್ಯಾನಿಕಲ್ ಎಂಜಿನಿಯರಿಂಗ್ ವಿಭಾಗದಲ್ಲಿ 4ನೇ ಸ್ಥಾನ ಪಡೆದಿದ್ದಾರೆ. ಅವರು 2013ರಲ್ಲಿ ಮೊದಲ ವರ್ಷದ ಎಂಜಿನಿಯರಿಂಗ್ ಪರೀಕ್ಷೆಯಲ್ಲಿ 94.06 ಶೇ.ಅಂಕ ಪಡೆದು ವಿಟಿಯುಗೆ ಮೊದಲ ಸ್ಥಾನ ಪಡೆದು ವಿವಿಯ ಎಲ್ಲ ದಾಖಲೆಗಳನ್ನು ಮುರಿದಿದ್ದರು ಎಂದು ಸಂಸ್ಥೆಯ ಅಧ್ಯಕ್ಷ ಮಂಜುನಾಥ ಭಂಡಾರಿ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

DH

DECCAN HERALD

Mangaluru, Tuesday January 24, 2017

Pages 20 Vol 18 No 24 ₹6.00 M www.deccanherald.com



Nadal enters Australian Open quarters P14





CENTRAL LIBRARY

# Govt keen on JEE-Main for all engineering colleges from 2018

**NEW DELHI, DHNS:** The Centre has decided to make the Joint Entrance Examination (JEE)-Main a pan India test for admissions to all technical institutes by force of a regulation from 2018.

The All India Council for Technical Education (AICTE) will formulate regulations making it mandatory for all technical institutions to accept JEE-Main scores for admitting students, so that they do not have to face multiple tests for gaining entry into engineering colleges.

The Indian Institutes of Technology (IITs) will continue to admit aspirants on the basis of their performance in JEE-Advance, conducted by the Joint Admission Board (JAB) of the premier technical institutes after the JEE-Main.


"We will introduce a common entrance test for admissions to all technical institutes from 2018. The AICTE will come up with a regulation for making it mandatory for all technical institutes to accept the JEE-Main scores in admissions. The common entrance test will be conducted more than once in a year," a source said.

The institutes, however, will have the autonomy to decide whether they want to admit students only on the basis of the scores obtained by them in JEE-Main or give weightage to the class XII examinations.

"It will be up to the universities and colleges to decide if they want to give 20% weightage to class XII board or 40%, for example. They will have this autonomy. But it will be mandatory for all of them to accept the test for the purpose of admissions," the source said.

An official told *DH*, "The central government has been mandated by the Constitution to maintain the standards of education in the country".

## One test



- AICTE will formulate regulations
- National Testing Service Institute to conduct exam
- Colleges to decide on giving weightage to class XII exams
- IITs will continue to admit students through JEE-Advance

ಮಂಗಳವಾರ, ಜನವರಿ 24, 2017 | ಮಂಗಳೂರು | ₹ 5.00 | ಪುಟ 22 | ಸಂಪುಟ 20 | ಸಂಚಿಕೆ 24

goo.gl/S62nF1 f/prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

CENTRAL LIBRARY

ಸಾಹಸ ಪ್ರದರ್ಶನ
ದೆಹಲಿಯ ರಾಜಪಥದಲ್ಲಿ 'ಶ್ವೇತ ಅಶ್ವ' ತಂಡ ಸೋಮವಾರ ತಾಲೀಮು ನಡೆಸಿತು

# ಎಂಜಿನಿಯರಿಂಗ್‌ಗೆ ಒಂದೇ ಪ್ರವೇಶ ಪರೀಕ್ಷೆ

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದ ಯಾವುದೇ ಎಂಜಿನಿಯರಿಂಗ್ ಕಾಲೇಜಿನಲ್ಲಿ ಪ್ರವೇಶ ಪಡೆಯಲು ವಿದ್ಯಾರ್ಥಿಗಳು ಒಂದೇ ಪ್ರವೇಶ ಪರೀಕ್ಷೆ ಬರೆದರೆ ಸಾಕು ಎನ್ನುವ ನಿಯಮ 2018ರಿಂದ ಜಾರಿಗೆ ಬರುವ ಸಾಧ್ಯತೆ ಇದೆ.

ಎಂಜಿನಿಯರಿಂಗ್ ಕಾಲೇಜುಗಳಿಗೆ ಪ್ರವೇಶ ಬಯಸುವ ವಿದ್ಯಾರ್ಥಿಗಳು ವಿವಿಧ ಪ್ರವೇಶ ಪರೀಕ್ಷೆಗಳನ್ನು ಬರೆಯಬೇಕಾದ ಹೊರೆ ನಿವಾರಿಸಲು, ಜೆಇಇ (ಮುಖ್ಯ) ಪರೀಕ್ಷೆಯ ಅಂಕಗಳನ್ನು ದೇಶದ ಎಲ್ಲ ತಾಂತ್ರಿಕ ಕಾಲೇಜುಗಳು ಒಪ್ಪಿಕೊಳ್ಳಬೇಕು ಎಂಬ ನಿಯಮವನ್ನು ಅಖಿಲ ಭಾರತ ತಾಂತ್ರಿಕ ಶಿಕ್ಷಣ ಸಮಿತಿ (ಎಐಸಿಟಿಇ) ರೂಪಿಸಲಿದೆ.

ಆದರೆ, ಜೆಇಇ (ಮುಖ್ಯ) ಪರೀಕ್ಷೆಯ ನಂತರ ನಡೆಯುವ ಜೆಇಇ (ಅಡ್ವಾನ್ಸ್) ಪರೀಕ್ಷೆಯ ಅಂಕ ಆಧರಿಸಿ ವಿದ್ಯಾರ್ಥಿಗಳಿಗೆ ಪ್ರವೇಶ ನೀಡುವ ಪದ್ಧತಿಯನ್ನು ಭಾರತೀಯ ತಾಂತ್ರಿಕ ಸಂಸ್ಥೆಗಳು (ಐಐಟಿ) ಮುಂದುವರಿಸಲಿವೆ.

'ದೇಶದ ಎಲ್ಲ ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಪ್ರವೇಶಕ್ಕೆ ನೆರವಾಗುವ ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು ನಾವು 2018ರಿಂದ ಜಾರಿಗೆ ತರುತ್ತೇವೆ. ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲು ಜೆಇಇ (ಮುಖ್ಯ) ಪರೀಕ್ಷೆಯ ಅಂಕಗಳನ್ನು ಎಲ್ಲ ತಾಂತ್ರಿಕ ಕಾಲೇಜುಗಳು ಮಾನದಂಡವಾಗಿ ಒಪ್ಪಿಕೊಳ್ಳಬೇಕು ಎಂಬ ನಿಯಮವನ್ನು ಎಐಸಿಟಿಇ ಸಿದ್ಧಪಡಿಸುತ್ತದೆ. ಪ್ರವೇಶ ಪರೀಕ್ಷೆಯನ್ನು ವರ್ಷದಲ್ಲಿ ಒಂದಕ್ಕಿಂತಲೂ ಹೆಚ್ಚು ಬಾರಿ ನಡೆಸಲಾಗುತ್ತದೆ' ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಆದರೆ, ಜೆಇಇ (ಮುಖ್ಯ) ಪರೀಕ್ಷೆಯ ಅಂಕ ಮಾತ್ರ ಆಧರಿಸಿ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಬೇಕೇ ಅಥವಾ ದ್ವಿತೀಯ ಪಿಯುಸಿ ಪರೀಕ್ಷೆಯ ಅಂಕಗಳನ್ನೂ ಪರಿಗಣಿಸಬೇಕೇ ಎಂಬುದನ್ನು ತೀರ್ಮಾನಿಸುವ ಸ್ವಾತಂತ್ರ್ಯ ಕಾಲೇಜುಗಳಿಗೆ ಇರುತ್ತದೆ ಎಂದು ಮೂಲಗಳು ವಿವರಿಸಿವೆ.

'ದ್ವಿತೀಯ ಪಿಯುಸಿಯ ಅಂಕಗಳಿಗೆ ಎಷ್ಟರಮಟ್ಟಿಗೆ ಪ್ರಾಧಾನ್ಯ ನೀಡಬೇಕು ಎಂಬುದನ್ನೂ ಕಾಲೇಜು, ವಿಶ್ವವಿದ್ಯಾಲಯಗಳೇ ತೀರ್ಮಾನಿಸಬಹುದು. ಆದರೆ, ಜೆಇಇ (ಮುಖ್ಯ) ಪರೀಕ್ಷೆ ಹೊರತುಪಡಿಸಿ, ಬೇರೆ ಪ್ರವೇಶ ಪರೀಕ್ಷೆ ಆಧರಿಸಿ ಪ್ರವೇಶ ನೀಡುವಂತಿಲ್ಲ' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

'ಕೇಂದ್ರ ಸರ್ಕಾರದ ಸಂಸ್ಥೆ ನಡೆಸುವ ಪ್ರವೇಶ ಪರೀಕ್ಷೆಯನ್ನು ಎಲ್ಲ ಶಿಕ್ಷಣ ಸಂಸ್ಥೆಗಳು ಒಪ್ಪಿಕೊಳ್ಳಬೇಕು ಎಂದು ಹೇಳುವ ಅಧಿಕಾರ ಎಐಸಿಟಿಇಗೆ ಇದೆಯೇ' ಎಂದು ಪ್ರಶ್ನಿಸಿದಾಗ, 'ದೇಶದಲ್ಲಿ ಶಿಕ್ಷಣದ ಗುಣಮಟ್ಟ ಕಾಯುವ ಕರ್ತವ್ಯ ಕೇಂದ್ರ ಸರ್ಕಾರದ್ದು' ಎಂದು ಅಧಿಕಾರಿಯೊಬ್ಬರು ವಿವರಿಸಿದರು.

ಕೇಂದ್ರ ಪ್ರೌಢ ಶಿಕ್ಷಣ ಮಂಡಳಿಯು (ಸಿಬಿಎಸ್‌ಇ) ಈಗ ಜೆಇಇ (ಮುಖ್ಯ) ಪರೀಕ್ಷೆ ನಡೆಸುತ್ತಿದೆ. ಇದರಲ್ಲಿನ ಅಂಕ ಪರಿಗಣಿಸಿ ರಾಷ್ಟ್ರೀಯ ತಾಂತ್ರಿಕ ಸಂಸ್ಥೆಗಳು (ಎನ್‌ಐಟಿ) ಹಾಗೂ ಕೇಂದ್ರ ಸರ್ಕಾರದ ಅನುದಾನ ಪಡೆಯುವ ತಾಂತ್ರಿಕ ಸಂಸ್ಥೆಗಳಿಗೆ ಪ್ರವೇಶ ನೀಡಲಾಗುತ್ತದೆ.

2018ರಿಂದ ಜೆಇಇ (ಮುಖ್ಯ) ಪರೀಕ್ಷೆ ನಡೆಸಲು ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯವು ರಾಷ್ಟ್ರೀಯ ಪರೀಕ್ಷಾ ಸೇವೆಗಳ ಸಂಸ್ಥೆ ಆರಂಭಿಸುವ ಯೋಜನೆ ಸಿದ್ಧಪಡಿಸಿದೆ.

ಈ ಬಗ್ಗೆ ಫೆಬ್ರುವರಿ 1ರಂದು ಘೋಷಣೆ ಹೊರಬೀಳುವ ಸಾಧ್ಯತೆ ಇದೆ ಎಂದು ಗೊತ್ತಾಗಿದೆ.

## ಬಿ.ಟೆಕ್ ವಿದ್ಯಾರ್ಥಿಗಳಿಗೆ ಪರೀಕ್ಷೆ

ಅಂತಿಮ ವರ್ಷದ ಬಿ.ಟೆಕ್ ವಿದ್ಯಾರ್ಥಿಗಳು ನೌಕರಿ ಗಿಟ್ಟಿಸಲು ಎಷ್ಟರಮಟ್ಟಿಗೆ ಸಾಮರ್ಥ್ಯ ಪಡೆದಿದ್ದಾರೆ ಎಂಬುದನ್ನು ಪರಿಶೀಲಿಸಲು 2018ರಿಂದ ಪ್ರತ್ಯೇಕ ಪರೀಕ್ಷೆ ನಡೆಸಲು ಎಐಸಿಟಿಇ ನಿಯಮ ರೂಪಿಸಲಿದೆ. ಬಿ.ಟೆಕ್ ಕೋರ್ಸ್ ನೀಡುವ ಶಿಕ್ಷಣ ಸಂಸ್ಥೆಗಳ ಗುಣಮಟ್ಟವನ್ನೂ ಈ ಪರೀಕ್ಷೆಗಳ ಮೂಲಕ ಪರಿಶೀಲಿಸುವ ಇರಾದೆ ಇದೆ ಎನ್ನಲಾಗಿದೆ.